




## ಹೊಸ ಐ ಕೂಲ್, ಐ ಫ್ರೆಶ್, ಐ ಸ್ಮಾರ್ಟ್

ಗೃಹೋಪಯೋಗಿ ವಸ್ತುಗಳಿಗೆ ಹೆಸರಾದ ಹೈರ್ ಇದೀಗ ವಿವಿಧ ಮಾದರಿಯ ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಿದೆ. ಬೇಸಿಗೆಯ ದಗೆಯನ್ನು ನಿವಾರಿಸಲು 'ಐ ಫ್ರೆಶ್', ಐ ಕೂಲರ್ ಉತ್ಪನ್ನಗಳನ್ನು ತಂದರೆ 'ಐ ಸ್ಮಾರ್ಟ್' ಎಂಬ ಇಂಟರ್ನೆಟ್ ಸೌಲಭ್ಯವಿರುವ 84 ಇಂಚಿನ ಆ್ಯಂಡ್ರಾಯ್ಡ್ ಆಧಾರಿತ ಎಲ್ಇಡಿ ಟೆಲಿವಿಷನ್ ಅನ್ನು ಬಿಡುಗಡೆ ಮಾಡಿದೆ. ಅಲ್ಲದೆ ರೆಫ್ರಿಜರೇಟರ್, ವಾಷಿಂಗ್ ಮೆಷಿನ್‌ಗಳನ್ನೂ ಹೊರತಂದಿದ್ದು ಗುಣಮಟ್ಟದಲ್ಲಿ ಉತ್ಕೃಷ್ಟವಾಗಿವೆ ಎನ್ನುವುದು ಕಂಪೆನಿ ವಿವರಣೆ. ಟೆಲಿವಿಷನ್ ಬೆಲೆ 10 ಲಕ್ಷ ರೂಪಾಯಿ, ರೆಫ್ರಿಜರೇಟರ್ ಬೆಲೆ 3.99 ಲಕ್ಷ ರೂಪಾಯಿ, ಏರ್‌ಕಂಡಿಷನರ್ ಬೆಲೆ 61 ಸಾವಿರ ರೂಪಾಯಿ.

ಮಾಹಿತಿಗೆ: 9810122728/ 9899605473





## ಲೈಮ್‌ರೋಡ್ ಥಂಡಾಯ್ ಗ್ಲಾಸ್

ಎಲಿಫೆಂಟ್ ಕಂಪೆನಿ ಥಂಡಾಯ್ ಗ್ಲಾಸ್‌ಗಳನ್ನು ಬಿಡುಗಡೆ ಮಾಡಿದೆ. ಲೈಮ್‌ರೋಡ್ ಆನ್‌ಲೈನ್ ಕಂಪೆನಿಯ ಮೂಲಕ ಗ್ರಾಹಕರಿಗೆ ನೀಡುವ ಈ ಉತ್ಪನ್ನಗಳಲ್ಲಿ ಹಲವಾರು ವೈವಿಧ್ಯಗಳಿವೆ. ಗ್ಲಾಸ್‌ಗಳು ಹ್ಯಾಂಡಿಯಾಗಿದ್ದು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಸುಲಭವಾಗಿವೆ. ಬೆಲೆ 476 ರೂಪಾಯಿ.

ಮಾಹಿತಿಗೆ: 9873108776, 8095104383

## ಬಿಸಿಲಿನಿಂದ ರಕ್ಷಣೆಗೆ ವಿಚಿ ಉತ್ಪನ್ನ

ಸುಡುಬಿಸಿಲಿನಿಂದ ತ್ವಚೆಗೆ ಹಾನಿಯಾಗುವುದನ್ನು ಮತ್ತು ಸೂರ್ಯನ ಅತಿನೇರಳೆ ಕಿರಣಗಳಿಂದ ಚರ್ಮವನ್ನು ರಕ್ಷಿಸಲು ವಿಚಿ ಹೊಸ ಉತ್ಪನ್ನವೊಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಕ್ಯಾಪಿಟಲ್ ಸೊಲೆಲಿ ಕ್ರೀಮ್ ಮತ್ತು ಮೈಕ್ರೊ ಫ್ಲ್ಯುಯಿಡ್ ಎಸ್‌ಪಿಎಫ್ 50 ಚರ್ಮವನ್ನು ಬಿಸಿಲಿನಿಂದ ಕಾಪಾಡಲಿದೆ. 50ಎಂಎಲ್ ಪ್ಯಾಕ್ ಬೆಲೆ 1090 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

ವಿವರಕ್ಕೆ: www.vichyindia.com








## ಲ್ಯಾಮಿನೇಟೆಡ್ ಫ್ಲೋರಿಂಗ್

ಗುಣಮಟ್ಟದ ಲ್ಯಾಮಿನೇಟೆಡ್ ಫ್ಲೋರಿಂಗ್ ಬ್ರ್ಯಾಂಡ್‌ಗೆ ಹೆಸರಾದ ಪೆರ್ಗೊ, ಇದೀಗ ವುಡ್ ಪಾರ್ಕ್ವೆಟ್ ಫ್ಲೋರಿಂಗ್ ಅನ್ನು ಮಾರುಕಟ್ಟೆಗೆ ತಂದಿದೆ. ಇದರಲ್ಲಿ ಒಟ್ಟು 14 ವಿಭಿನ್ನ ವಿನ್ಯಾಸಗಳ ನೆಲಹಾಸು ಮಾದರಿಗಳಿವೆ. ಒಳಾಂಗಣ ವಿನ್ಯಾಸದ ಅನುಕೂಲ, ಆಕರ್ಷಕ ನೋಟಕ್ಕೆ ತಕ್ಕಂತೆ ಇರುವ ಬಣ್ಣಗಳು ಮನೆಗೆ ಹೊಸ ಮೆರುಗು ನೀಡುತ್ತದೆ. ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗೆ: 022 26434448/26418669

## ಲೀ ಪ್ರಿಂಟೆಡ್ ಜೀನ್ಸ್

ಡಿಎಫ್‌ಎಕ್ಸ್ ಸ್ಪೆಷಲ್ ಇಫೆಕ್ಟ್ ಇರುವ ಹೊಸ ಡೆನಿಮ್ ಪ್ರಿಂಟೆಡ್ ಜೀನ್ಸ್ ಪ್ಯಾಂಟ್‌ಗಳನ್ನು ಲೀ ಕಂಪೆನಿ ಹೊರತಂದಿದೆ. ಚರ್ಮಕ್ಕೆ ಅಂಟಿಕೊಂಡಂತಿರುವ ಇದರಲ್ಲಿ ಡಾರ್ಕ್ ಕಲರ್ ಪ್ರಿಂಟೆಡ್ ಸ್ಕಿನ್ನೀಸ್, ಫ್ಲೋರಲ್ ಬಾಟಮ್, ಲೀ ರೌಂಡ್ ಅಪ್ ವೈವಿಧ್ಯಗಳಿವೆ. ಬೇಸಿಗೆಗೆ ಅನುಕೂಲವಾಗುವಂತೆ ಕೋರಲ್ ಪಿಂಕ್, ಸ್ನೋ ವೈಟ್, ನೀಲಿ, ಹಸುರು ಮುಂತಾದ ಬಣ್ಣಗಳಲ್ಲಿ ಸಿಗುತ್ತದೆ.

